ತಾರೀಖು 21ನೆ ಜನವರಿ 1909.

ನಂ. ರೆವಿನ್ಯೂ. 5096—ಫಾರೆಸ್ಟ್ 92-08-4. ಮೈಸೂರು ಸೀಮೆಯ ಫಾರೆಸ್ಟ್ ಸರ್ವೇ ಸೂಪರ್‌ಟೆಂಡೆಂಟರಾದ ಮಿ|| ಟಿ. ಇ. ಎಂ. ಕ್ಲಾಡಿಯಸ್‌ರವರು 1908ನೆ ಆಕ್ಟೋಬರ್ 13ನೆ ಮಾಡ್ಕಂ ರೆವಿನ್ಯೂ. 2268—ಫಾರೆಸ್ಟ್. 92-08-2ನೆ ನಂಬರ್ ಸರ್ಕಾರಿ ಹುಕುಮಿನಲ್ಲಿ ಅವರಿಗೆ ಮಂಜೂರಾಗಿದ್ದ 12 ದಿವಸಗಳ ಪೈಕಿ 7 ದಿವಸಗಳ ಪ್ರಿವಿಲೇಜ್ ರಜಾ ಮಾತ್ರ ಉಪಯೋಗಿಸಿಕೊಂಡಿರುವ ಪ್ರಯುಕ್ತ ಉಪಯೋಗಿಸಿಕೊಳ್ಳದೆ ಇದ್ದ 5 ದಿನಸಗಳ ರಜಾವನ್ನು ಈ ಮೂಲಕ ರದ್ದು ಮಾಡಿ ಇರುತ್ತದೆ.

ಹುಕುಂ ಬವೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 22ನೆ ಜನವರಿ 1909.

ನಂ. 68—183, ವಾಟರ್ ಸಪ್ಲೈ ಮತ್ತು ಸ್ಯೂವರ್ಸ್ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ್ ಮಿ|| ವಿ. ರಂಗಸ್ವಾಮಿ ಐಯ್ಯಂಗಾರ್ ಯವರಿಗೆ, ಈ ಆಫೀಸಿನ ಸ್ಯ 1908ನೆ ಡಿಸೆಂಬರ್ 12ನೆ ತಾರೀಖು 1152-7889ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ನವಂಬರ್ 17ನೆ ತಾರೀಖು ಲಾಗಾಯಿತು ಕೊಟ್ಟಿದ್ದ 2 ತಿಂಗಳು ಪ್ರಿವಿಲೇಜ್ ರಜವನ್ನು ಇನ್ನೂ 21 ದಿನಗಳು ಜಾಸ್ತಿ ಮಾಡಲ್ಪಟ್ಟಿದೆ.

II. ಹಂಗಾಮಿ ತರೀಖಾಗಿ ಮಾಡಲ್ಪಟ್ಟ ಏರ್ಪಾಟು ಹಾಗೆಯೇ ನಡಿಯತಕ್ಕದ್ದು.

ಹುಕುಂ ಬವೋಜೀಬ್,
ಡಬ್ಲ್ಯೂ. ಮೆಕ್‌ಹರ್ಬಿ,
ಮೈಸೂರು ಗವರ್ನ್‌ಮೆಂಟ್ ಪಬ್ಲಿಕ್ ವರ್ಕ್ಸ್ ಇಲಾಖಾ ಸೆಕ್ರೆಟರಿ.

ಮಿಲಿಟರಿ.

ಇಸ್ತಿಹಾರ್‌ನಾಮೆ.

ತಾರೀಖು 27ನೆ ಜನವರಿ 1909.

ನಂ. ಮಿಲಿಟರಿ. 555-6-69-08; ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜರವರು ಮೈಸೂರು ಲೋಕಲ್ ಸರ್ವಿಸ್ ರೆಜಿಮೆಂಟಿನಲ್ಲಿ ಈ ಕೆಳಗೆ ಕಂಡ ಬಡ್ತಿಗಳನ್ನು 1908ನೆ ಇಸವಿ ಜೂಲೈ ಗುರೆ ತಾರೀಖು ಲಾಗಾಯಿತು ಮುಂ ಜೂರ್ಮಾಡಿರುತ್ತಾರೆ :—

ಹೆಸರು.	ಯಾವ ದರ್ಜೆಯಿಂದ.	ಯಾವ ದರ್ಜೆಗೆ.
ಕಂಕರರಾವ್ ...	2ನೆ ಗ್ರೇಡ್ ಜಮಾದಾರ್ ...	1ನೆ ಗ್ರೇಡ್ ಜಮಾದಾರ್
ಲಕ್ಷ್ಮಣರಾವ್ ...	3ನೆ ಗ್ರೇಡ್ ಡಿಟೋ ...	2ನೆ ಗ್ರೇಡ್ ಜಮಾದಾರ್
ಖಾಜಾಹುಸೇನ್ ...	ಡಿಟೋ ...	ಡಿಟೋ
ಲಿಂಗೋಜಿ ಮೋಹಿಟೆ ...	ಡಿಟೋ ...	ಡಿಟೋ
ಮಹಬೂಬ್‌ಖಾನ್ ...	4ನೆ ಗ್ರೇಡ್ ಜವಾದಾರ್ ...	3ನೆ ಗ್ರೇಡ್ ಜವಾದಾರ್
ದೇವರಾವ್ ಸಿಂಧೆ ...	ಡಿಟೋ ...	ಡಿಟೋ
ಫೈಯಾಜ್ ಮಹಮದ್‌ಖಾನ್ ...	ಡಿಟೋ ...	ಡಿಟೋ

ಹುಕುಂ ಬವೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿ.